**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ ಕೇಂದ್ರೀಕೃತ ದಾಖಲಾತಿ ಘಟಕ, ಕೆ.ಜಿ ರಸ್ತೆ, ಬೆಂಗಳೂರು-09**

## 2020-21 ನೇ ಸಾಲಿನಲ್ಲಿ ಎರಡು ವರ್ಷದ ಬಿ.ಇಡಿ ಕೋರ್ಸಿನ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಭ್ಯರ್ಥಿಗಳು ಗಮನಿಸಬೇಕಾದ ಮುಖ್ಯ ಅಂಶಗಳು.

- **ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಭರ್ತಿ ಮಾಡುವ ಮುನ್ನ ಅಧಿಸೂಚನೆಯನ್ನು ಹಾಗೂ ನೀಡಿರುವ ಇತರೆ ಸೂಚನೆಗಳನ್ನು, ಓದಿ ಅರ್ಥೈಸಿಕೊಂಡು ಶೈಕ್ಷಣಿಕ ವಿದ್ಯಾರ್ಹತೆ, ಶುಲ್ಕ, ಮೀಸಲಾತಿ ಮತ್ತಿತರ ವಿವರಗಳನ್ನು ಖಚಿತಪಡಿಸಿಕೊಂಡು ತಪ್ಪಿಲ್ಲದೆ ಆನ್‌ಲೈನ್ ಅರ್ಜಿ ಭರ್ತಿ ಮಾಡುವುದು.**

- ಬಿ.ಇಡಿ ಕೋರ್ಸಿಗೆ ದಾಖಲಾತಿ ಬಯಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು www.schooleducation.kar.nic.in ಅಂತರ್ಜಾಲ ತಾಣದಲ್ಲಿ login ಆಗಿ ONLINE ಮೂಲಕವೇ ಸಲ್ಲಿಸಬೇಕು. ಇತರೆ ಯಾವುದೇ ನಮೂನೆಗಳಲ್ಲಿಯಾಗಲೀ ಅಥವಾ ಬೆರಳಚ್ಚು / ಪೋಟೋ ಪ್ರತಿ ಮಾಡಿರುವ, ಕೈ ಬರಹದಿಂದ ಬರೆದಿರುವ ಅರ್ಜಿಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.
- ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

- **ಅರ್ಜಿ ಶುಲ್ಕ ಪಾವತಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ ONLINE ಮೂಲಕ ಅಂದರೆ ನೆಟ್ ಬ್ಯಾಂಕಿಂಗ್, ಕ್ರೆಡಿಟ್ ಕಾರ್ಡ್, ಡೆಬಿಟ್ ಕಾರ್ಡ್ ಹಾಗೂ UPI ಮೂಲಕ ಮಾತ್ರ ಪಾವತಿಸಲು ಅವಕಾಶವಿರುತ್ತದೆ. ಇನ್ನಾವುದೇ ಸ್ವರೂಪದಲ್ಲಿ ಶುಲ್ಕ ಪಾವತಿಸಲು ಅವಕಾಶವಿರುವುದಿಲ್ಲ.**

- ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಮೂಲಕ ನೀಡುವ ಮಾಹಿತಿಗಳನ್ನು ಪ್ರತಿ ಹಂತದಲ್ಲಿಯೂ ಕಡ್ಡಾಯವಾಗಿ Submit ಮಾಡುವುದು. ಪ್ರತಿ ಹಂತದಲ್ಲೂ ಅಗತ್ಯವಿರುವ ಅಧಿಕೃತ ಮಾಹಿತಿಯ ದಾಖಲೆಗಳನ್ನು ಎಚ್ಚರಿಕೆಯಿಂದ ಮೊದಲೇ ಸಿದ್ಧಪಡಿಸಿಟ್ಟುಕೊಂಡು, ಸರಿಯಾದ ಮಾಹಿತಿ ಭರ್ತಿ ಮಾಡಿರುವುದನ್ನು ಖಾತ್ರಿಪಡಿಸಿಕೊಂಡ ನಂತರವೇ ಆನ್‌ಲೈನ್ ಅರ್ಜಿಗಳನ್ನು ಪೂರ್ಣಗೊಳಿಸಿ Submit ಮಾಡುವುದು. ಅಭ್ಯರ್ಥಿಯು ಶುಲ್ಕ ಪಾವತಿಸಿದ ನಂತರ ಅರ್ಜಿಯಲ್ಲಿ ಭರ್ತಿ ಮಾಡಿದ ಯಾವುದೇ ಮಾಹಿತಿಯನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

- ಅರ್ಜಿಯಲ್ಲಿನ ಮಾಹಿತಿಗಳು ದೋಷಪೂರಿತ ಹಾಗೂ ತಪ್ಪಾಗಿದ್ದಲ್ಲಿ, ಅಭ್ಯರ್ಥಿಗಳೇ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ.

- ಒಮ್ಮೆ ಪಾವತಿಸಿದ ಅರ್ಜಿಯ ಶುಲ್ಕವನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸುವುದಿಲ್ಲ ಹಾಗೂ ಹೊಂದಾಣಿಕೆ ಮಾಡಲಾಗುವುದಿಲ್ಲ.

- ಅಭ್ಯರ್ಥಿಗಳು ತಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಮತ್ತು ಸಹಿಯನ್ನು ಸ್ಕ್ಯಾನ್ ಮಾಡಿ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡುವುದು ಕಡ್ಡಾಯ. (ಪ್ರತಿ image ನ ಅಳತೆಯು 05 Kb ಯಿಂದ 50 Kb ಒಳಗೆ ಇರತಕ್ಕದ್ದು).

- ONLINE ಅರ್ಜಿಯ ಮೂಲಕ ನೀಡಿರುವ ಮಾಹಿತಿಗಳನ್ನೇ ಆಧಾರವಾಗಿಟ್ಟುಕೊಂಡು ಅಭ್ಯರ್ಥಿಗಳ ಸೀಟು ಹಂಚಿಕೆ ಪ್ರಕ್ರಿಯೆಯನ್ನು ನಡೆಸುವುದರಿಂದ, ಯಾವುದೇ ಹಂತದಲ್ಲಿ ಅಪೂರ್ಣ / ಅಸ್ಪಷ್ಟ / ತಪ್ಪು ಮಾಹಿತಿ ನೀಡಿದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಅಭ್ಯರ್ಥಿಗಳೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.

- ONLINE ಅರ್ಜಿಯಲ್ಲಿ ನಮೂದಿಸುವ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸ ಅಭ್ಯರ್ಥಿಯದೇ ಆಗಿರತಕ್ಕದ್ದು, ಅದನ್ನು ಸೀಟು ಹಂಚಿಕೆ ಪ್ರಕ್ರಿಯೆ ಮುಗಿಯುವ ಮೊದಲು ಬದಲಾವಣೆ ಮಾಡಿದ್ದಲ್ಲಿ ಆಗಬಹುದಾದ ಪರಿಣಾಮಗಳಿಗೆ ಅಭ್ಯರ್ಥಿಗಳೇ ಹೊಣೆಗಾರರಾಗಿರುತ್ತಾರೆ.

- ONLINE ಅರ್ಜಿಯಲ್ಲಿ ಮೀಸಲಾತಿ ಸೌಲಭ್ಯಕ್ಕಾಗಿ ಇರುವ ಅಂಕಣವನ್ನು, ಮೀಸಲಾತಿ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು. ಅಂಕಣವನ್ನು ಖಾಲಿ ಬಿಟ್ಟಲ್ಲಿ ಅಥವಾ ತಪ್ಪಾಗಿ ನಮೂದಿಸಿದ್ದಲ್ಲಿ ಅದರಿಂದಾಗುವ ಪರಿಣಾಮಗಳಿಗೆ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ. ನಂತರ ಯಾವುದೇ ಹಂತದಲ್ಲಿ ಮೀಸಲಾತಿಯನ್ನು ಸೇರ್ಪಡೆ/ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

- ಮೀಸಲಾತಿ ಕೋರುವ ಎಲ್ಲಾ ಪ್ರಮಾಣ ಪತ್ರಗಳ ನಮೂನೆಗಳನ್ನು ಈ ವೆಬ್‌ಸೈಟ್‌ನಲ್ಲಿ ನೀಡಿರುವ Brochure ನಲ್ಲಿ ಕೊಟ್ಟಿರುವಂತೆ ಅಥವಾ ಅನ್ವಯಿಸುವ ನಿಯಮಗಳ ನಮೂನೆಯಲ್ಲಿಯೇ ಇರಬೇಕು. ಪ್ರಮಾಣ ಪತ್ರಗಳನ್ನು ನಿರ್ದಿಷ್ಟ ಹಾಗೂ ಸಂಬಂಧಪಟ್ಟ ಪ್ರಾಧಿಕಾರದಿಂದ ONLINE ಮೂಲಕ ಅರ್ಜಿ ಸಲ್ಲಿಸುವ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು.
- ಅರ್ಜಿಯಲ್ಲಿನ ವಿಶೇಷ ಗುಂಪಿನ ಅಂಕಣದಲ್ಲಿ ಗಡಿನಾಡು ಕನ್ನಡಿಗರು ಅಥವಾ ಹೊರನಾಡು ಕನ್ನಡಿಗರು ಆಗಿದ್ದಲ್ಲಿ ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು.
- ಶುಲ್ಕ ಪಾವತಿಸಿದ ಕೂಡಲೇ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಮುದ್ರಿತ ಮೂಲ ಪ್ರತಿಯನ್ನು ಪಡೆದುಕೊಂಡು ಮುಂದಿನ ಉಪಯೋಗಕ್ಕಾಗಿ ಸಂರಕ್ಷಿಸಿ ಇಟ್ಟುಕೊಳ್ಳುವುದು. ಮುದ್ರಿತ ಅರ್ಜಿಯು ಒಂದು ವೇಳೆ ಕಳೆದು ಹೋದಲ್ಲಿ ಮೇಲೆ ತಿಳಿಸಿದ ವೆಬ್‌ಸೈಟ್‌ನಲ್ಲಿ ನಿಮ್ಮ User ID and Password ಗಳನ್ನು ಬಳಸಿ ಪ್ರತಿಯನ್ನು ಪಡೆದುಕೊಳ್ಳುವುದು.

- ಅಭ್ಯರ್ಥಿಗಳು ತಮ್ಮ ಮೂಲ ಪ್ರಮಾಣ ಪತ್ರಗಳ ಪರಿಶೀಲನೆಗೆ ಹಾಜರಾಗಲು ಬಯಸುವ ಜಿಲ್ಲೆಯ ನೋಡಲ್/ ವ್ಯವಸ್ಥಾಪಕ ಕೇಂದ್ರಗಳನ್ನು ಅಧಿಸೂಚನೆಯ **ಅನುಬಂಧ-04**ರಲ್ಲಿ ನೀಡಲಾಗಿದೆ.

ಅದರಂತೆ, ಅಭ್ಯರ್ಥಿಗಳು ಬಯಸುವ ವ್ಯವಸ್ಥಾಪಕ ಕೇಂದ್ರಗಳನ್ನು ಆನ್‌ಲೈನ್ ಅರ್ಜಿಯಲ್ಲಿ ಆಯ್ಕೆಮಾಡಿಕೊಳ್ಳುವುದು.

- ಕೋವಿಡ್-19 ರ ಹಿನ್ನೆಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಕೌನ್ಸಿಲಿಂಗ್ ಮೂಲಕ ಸೀಟು ಹಂಚಿಕೆ ಮಾಡುವ ಪ್ರಕ್ರಿಯೆ ಇರುವುದಿಲ್ಲ. ಬದಲಾಗಿ, ಸೀಟು ಹಂಚಿಕೆ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್‌ನಲ್ಲಿಯೇ ನಿರ್ವಹಿಸಲಾಗುವುದು. ಈ ಕಾರಣದಿಂದ ಆನ್‌ಲೈನ್ ಅರ್ಜಿಯಲ್ಲಿ ಅಭ್ಯರ್ಥಿಯು ದಾಖಲಾತಿ ಬಯಸುವ ಸಂಸ್ಥೆ/ಕಾಲೇಜಿನ (Institution choice) ಆದ್ಯತೆಯನ್ನು ನಮೂದಿಸಬೇಕು. ಒಬ್ಬ ಅಭ್ಯರ್ಥಿಯು ತಾನು ದಾಖಲಾತಿ ಬಯಸುವ ಎಲ್ಲಾ ಸಂಸ್ಥೆಗಳಿಗೆ ಆದ್ಯತೆ ನೀಡಬಹುದು. ಇದರಿಂದ ಅಭ್ಯರ್ಥಿಯು ತಾನು ದಾಖಲಾತಿ ಬಯಸುವ ಸಂಸ್ಥೆ/ಕಾಲೇಜುಗಳ ಆದ್ಯತೆಯನ್ನು ಗರಿಷ್ಠ ಸಂಖ್ಯೆಯಲ್ಲಿ ನೀಡಬಹುದು (candidates can entry any number of options of their choice). ಅಭ್ಯರ್ಥಿಯು ಇದನ್ನು ಜಾಗರೂತೆಯಿಂದ ಗಮನಿಸಿ ಸಂಸ್ಥೆಯ ಆದ್ಯತೆಯನ್ನು ನೀಡುವುದು.
- ಅಭ್ಯರ್ಥಿಗಳು ಪ್ರತಿ ಐದು ಅಥವಾ ಹತ್ತು Options (ಸಂಸ್ಥೆ/ಕಾಲೇಜಿನ ಆದ್ಯತೆ) ಗಳನ್ನು ದಾಖಲಿಸಿದ ನಂತರ submit button ಆಯ್ಕೆ ಮಾಡಿ, ಅಂದರೆ ನೀವು ಸುಮಾರು 300(Options) ಗಳನ್ನು ಎಂಟ್ರಿ ಮಾಡಲು ಯೋಚಿಸಿದ್ದರೆ, ಎಲ್ಲಾ Options ಗಳನ್ನು ಎಂಟ್ರಿ ಮಾಡಲು ಕೊನೆಯವರೆಗೆ ಕಾದಲ್ಲಿ, Session Time Out ಆಗುತ್ತದೆ.ಆದ್ದರಿಂದ ಪ್ರತಿ 5 ಅಥವಾ 10 Options ಗಳಿಗೆ submit button ಅನ್ನು ಆಯ್ಕೆ ಮಾಡಿ.

- ಆನ್‌ಲೈನ್ ಅರ್ಜಿಯಲ್ಲಿ ಅಭ್ಯರ್ಥಿಯು ನಮೂದಿಸಿದ ಆದ್ಯತಾ ಸಂಸ್ಥೆ/ಕಾಲೇಜು ಹಂಚಿಕೆಯಾಗದ ಪಕ್ಷದಲ್ಲಿ, ಅಭ್ಯರ್ಥಿಯು ತಾನು ದಾಖಲಾತಿ ಬಯಸುವ ಇತರೆ ಜಿಲ್ಲೆಯ ಆದ್ಯತೆಯನ್ನು ಅರ್ಜಿಯಲ್ಲಿ ನೀಡಿರುವ ನಿಗದಿತ ಕಾಲಂನಲ್ಲಿ ಭರ್ತಿ ಮಾಡುವುದು. ನಮೂದಿಸಿರುವ ಇತರೆ ಜಿಲ್ಲೆಯ ಸಂಸ್ಥೆಗಳಲ್ಲಿ ಸೀಟುಗಳು ಲಭ್ಯವಿದ್ದಲ್ಲಿ ಹಂಚಿಕೆಮಾಡಲಾಗುವುದು. ಈ ಹಿನ್ನೆಲೆಯಲ್ಲಿ ಅಭ್ಯರ್ಥಿಯು ಗರಿಷ್ಠ ಮಟ್ಟದಲ್ಲಿ ಸಂಸ್ಥೆಯ/ಕಾಲೇಜಿನ ಆದ್ಯತೆಗಳನ್ನು ನೀಡುವುದು.

- ಅಭ್ಯರ್ಥಿಯು ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಿರುವ ಜಿಲ್ಲಾ ನೋಡಲ್/ ವ್ಯವಸ್ಥಾಪಕ ಕೇಂದ್ರಗಳಲ್ಲಿ(ಡಯಟ್/ಸಿಟಿಇ) ಆಯ್ಕೆ ಪಟ್ಟಿಯಂತೆ ತಮ್ಮ ಮೂಲ ಪ್ರಮಾಣ ಪತ್ರಗಳ ಪರಿಶೀಲನೆಗೆ ಹಾಜರಾಗಿ ದಾಖಲಾತಿ ಪಡೆಯುವುದರಿಂದ ತಪ್ಪದೇ ವ್ಯವಸ್ಥಾಪನಾ ಕೇಂದ್ರವನ್ನು ಆಯ್ಕೆ ಮಾಡುವುದು.

- ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ಸಂಬಂಧಿಸಿದ ವ್ಯವಸ್ಥಾಪಕ/ನೋಡಲ್ ಕೇಂದ್ರದಲ್ಲಿ ಹಾಜರಾಗಬೇಕಾದ ದಿನಾಂಕವನ್ನು ಇಲಾಖಾ ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗುವುದು.

- ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳು ನಿಗದಿತ ದಿನಾಂಕಗಳಂದು ಸಂಬಂಧಿಸಿದ ಜಿಲ್ಲಾ ವ್ಯವಸ್ಥಾಪಕ ಕೇಂದ್ರಗಳಲ್ಲಿ ಅರ್ಜಿಯಲ್ಲಿ ನಮೂದಿಸಿದ ಮಾಹಿತಿಯಂತೆ ತಮ್ಮ ಮೂಲ ಪ್ರಮಾಣ ಪತ್ರಗಳೊಂದಿಗೆ ಪರಿಶೀಲನೆಗೆ ಹಾಜರಾಗುವುದು. ನಿಗದಿತ ದಿನಾಂಕದೊಳಗಾಗಿ ಮೂಲ ಪ್ರಮಾಣ ಪತ್ರಗಳ ಪರಿಶೀಲನೆಗೆ ಗೈರು ಹಾಜರಾದಲ್ಲಿ ಅಂತಹ ಅಭ್ಯರ್ಥಿಗಳನ್ನು ಮುಂದಿನ ಆಯ್ಕೆ ಪ್ರಕ್ರಿಯೆಗೆ (ಕಾಲೇಜು ಸಹಿತ ಸೀಟು ಹಂಚಿಕೆ ಪಟ್ಟಿ) ಪರಿಗಣಿಸಲಾಗುವುದಿಲ್ಲ.

- ಮೊದಲ ಸುತ್ತಿನ ದಾಖಲಾತಿ ಪ್ರಕ್ರಿಯೆ ಮುಗಿದ ನಂತರ Institution wise remaining seats (category wise) ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

- ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗೆ ಹಂಚಿಕೆಯಾದ ಕಾಲೇಜು/ಸಂಸ್ಥೆ ಒಪ್ಪಿಗೆ ಇಲ್ಲದಿದ್ದಲ್ಲಿ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ Seat Matrix ಅನ್ನು ಪರಿಶೀಲಿಸಿ, ಮತ್ತೊಮ್ಮೆ ಲಾಗಿನ್ ಮಾಡಿ ನಮೂನೆಯಲ್ಲಿ ನಿಗದಿತ ದಿನಾಂಕದೊಳಗೆ ಸಂಸ್ಥೆಯ ಆದ್ಯತೆಯನ್ನು (Institution choice) ಕಡ್ಡಾಯವಾಗಿ (Option Entry) ನಮೂದಿಸಬೇಕು
    - **ಪ್ರತಿ ಅಭ್ಯರ್ಥಿಗೆ ಎರಡು ಬಾರಿ ಮಾತ್ರ ಸೀಟು ಹಂಚಿಕೆ ಮಾಡಿ ದಾಖಲಾತಿಗೆ ಅವಕಾಶ ನೀಡಲಾಗುತ್ತದೆ. ಎರಡು ಬಾರಿಯೂ ದಾಖಲಾತಿ ಹೊಂದದ ಅಭ್ಯರ್ಥಿಯ ಸೀಟು ಹಂಚಿಕೆ/ ದಾಖಲಾತಿಯನ್ನು ರದ್ದುಪಡಿಸಲಾಗುವುದು.**

## ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ವಿಧಾನ

**ಸೂಚನೆ:**

ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಸಲ್ಲಿಸಬೇಕಾದ ವಿವರಗಳನ್ನು ಎಚ್ಚರಿಕೆಯಿಂದ ತುಂಬುವುದು. **ಶುಲ್ಕ ಸಂದಾಯಕ್ಕೆ ಮೊದಲು ವಿವರಗಳಲ್ಲಿ ತಿದ್ದುಪಡಿ ಮಾಡಲು ಅವಕಾಶವಿರುತ್ತದೆ.** ಆದರೆ, ಒಮ್ಮೆ ಶುಲ್ಕ ಸಂದಾಯವಾದ ನಂತರ ವಿವರಗಳಲ್ಲಿ ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ.

## ಅರ್ಜಿ ತುಂಬುವ ಪ್ರಕ್ರಿಯೆ

- www.schooleducation.kar.nic.in ನಲ್ಲಿ ಲಭ್ಯವಿರುವ Online Application for 2 year B.Ed course 2020-21 ಲಿಂಕ್ ಅನ್ನು ಕ್ಲಿಕ್ ಮಾಡಿ.

- ನಂತರ Register ಬಟನ್ ಅನ್ನು ಕ್ಲಿಕ್ ಮಾಡಿ ಅಲ್ಲಿ ನಿಮ್ಮ ಹೆಸರು, ಮೊಬೈಲ್ ಸಂಖ್ಯೆ, Email-ID, User ID ಮತ್ತು Password ನಮೂದಿಸಿ ನೋಂದಣಿ ಮಾಡಿಕೊಳ್ಳಿ.

  **ಗಮನಿಸಿ:** (ONLINE ಅರ್ಜಿಯಲ್ಲಿ ನಮೂದಿಸುವ ಮೊಬೈಲ್ ಸಂಖ್ಯೆ ಮತ್ತು ಇ-ಮೇಲ್ ವಿಳಾಸ ನಿಮ್ಮದೇ ಆಗಿರತಕ್ಕದ್ದು, ಅದನ್ನು ಸೀಟು ಹಂಚಿಕೆ ಪ್ರಕ್ರಿಯೆ ಮುಗಿಯುವ ಮೊದಲು ಬದಲಾವಣೆ ಮಾಡಿದ್ದಲ್ಲಿ ಆಗಬಹುದಾದ ಪರಿಣಾಮಗಳಿಗೆ ನೀವೇ ಹೊಣೆಗಾರರಾಗಿರುತ್ತೀರಿ, ಕಾರಣ ಮುಂದಿನ ಸೀಟು ಹಂಚಿಕೆ ಪ್ರಕಿಯೆಯಲ್ಲಿ ಕಾಲಕಾಲಕ್ಕೆ ಅಗತ್ಯವಿರುವ ಮಾಹಿತಿಯನ್ನು ಈ ಮೊಬೈಲ್ ಸಂಖ್ಯೆ ಹಾಗೂ ಇ-ಮೇಲ್ ಐಡಿಗೆ ಕಳುಹಿಸಲಾಗುವುದು).

- ನೋಂದಣಿ ಯಶಸ್ವಿಯಾದ ನಂತರ ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಗೆ Application No, User ID ಮತ್ತು Password ಗಳ SMS ಬರುವುದು. (User ID ಮತ್ತು Password ಗಳನ್ನು ಮುಂದಿನ ಪ್ರಕ್ರಿಯೆಗಳ ಸಲುವಾಗಿ ತಪ್ಪದೆ ಒಂದು ಕಡೆ ದಾಖಲಿಸಿಕೊಳ್ಳಿ)

- ನೋಂದಣಿ ಪ್ರಕ್ರಿಯೆ ಮುಗಿದ ತಕ್ಷಣ ನಂತರ Login Page ತೆರೆದುಕೊಳ್ಳುವುದು. ನಿಮ್ಮ SMS ನಲ್ಲಿರುವ User ID ಮತ್ತು Password ನ್ನು ಬಳಸಿ Login ಆಗಿ.

- ಯಶಸ್ವಿಯಾಗಿ Login ಆದ ನಂತರ ಮೊದಲು Personal Details tab ಅನ್ನು open ಮಾಡಿ ನಿಮ್ಮ ವೈಯಕ್ತಿಕ ವಿವರಗಳನ್ನು ತುಂಬಿ Submit ಮಾಡಿ.

- ಈಗ Reservation tab ಅನುß open ಮಾಡಿ ನೀವು ಬಯಸುವ ಮೀಸಲಾತಿ ವಿವರಗಳನ್ನು ತುಂ© Submit ಮಾಡಿ. (ಜಾತಿ, ಆದಾಯ ಪ್ರಮಾಣ ಪತ್ರ ಮತ್ತು ಕಲ್ಯಾಣ ಕರ್ನಾಟಕ ಮೀಸಲಾತಿ 371(ಜೆ) ಗೆ ಸಂಬಂಧಿಸಿದ ಮೀಸಲಾತಿಯ ಪ್ರಮಾಣ ಪತ್ರಗಳ ಆರ್.ಡಿ ನಂಬರ್ ನಮೂದಿಸುವುದು ಕಡ್ಡಾಯ).

- ಮೀಸಲಾತಿ ವಿವರಗಳನ್ನು Submit ಮಾಡಿದ ನಂತರ Education tab ಅನ್ನು open ಮಾಡಿ. ವಿದ್ಯಾರ್ಹತೆಗೆ ಸಂಬಂಧಿಸಿದ ವಿವರಗಳನ್ನು ತುಂಬಿ Submit ಮಾಡಿ. (ಶೈಕ್ಷಣಿಕ ಅರ್ಹತೆಯ ಅಂಕ ವಿವರಗಳನ್ನು ಅಂಕಪಟ್ಟಿಯಲ್ಲಿರುವಂತೆ ಎಲ್ಲಾ ವರ್ಷ /ಸೆಮಿಸ್ಟರ್‌ಗಳ ಒಟ್ಟು ಗರಿಷ್ಠ ಅಂಕಗಳು ಹಾಗೂ ಒಟ್ಟು ಪಡೆದ ಅಂಕಗಳನ್ನು ನಿಗಧಿತ ಅಂಕಣಗಳಲ್ಲಿ ಭರ್ತಿ ಮಾಡುವುದು. ಯಾವುದೇ ವ್ಯತ್ಯಾಸಕ್ಕೆ ಅವಕಾಶವಿಲ್ಲದಂತೆ ಎಚ್ಚರಿಕೆ ವಹಿಸುವುದು.)

- ನಂತರ ಅತಿ ಮುಖ್ಯವಾದ Institution tab ಅನ್ನು open ಮಾಡಿ ನೀವು ದಾಖಲಾತಿ ಬಯಸುವ ಬಿ.ಇಡಿ ಸಂಸ್ಥೆಯ ಮುಂದೆ ಆದ್ಯತಾ ಸಂಖ್ಯೆಯನ್ನು ನಮೂದಿಸಿ. (ಅಭ್ಯರ್ಥಿಯು ತಾವು ಬಯಸುವ ಎಲ್ಲಾ ಸಂಸ್ಥೆಗಳಿಗೂ ಆದ್ಯತೆಯನ್ನು ನಮೂದಿಸಬಹುದು. ಇದಕ್ಕೆ ಯಾವುದೇ ಮಿತಿ ಇರುವುದಿಲ್ಲ) **ಆದರೆ, session time out ಆಗುವ ಸಂಭವ ಇರುವುದರಿಂದ ಪ್ರತಿ 5-10 ಸಂಸ್ಥೆಯ ಆದ್ಯತೆಗಳನ್ನು ನಮೂದಿಸಿದ ತಕ್ಷಣ Submit button ಅನ್ನು ಒತ್ತುವುದು. ಪ್ರಸ್ತುತ 20 ಆದ್ಯತೆಗಳಿಗೆ ಅವಕಾಶ ನೀಡಲಾಗಿದೆ, ಹೆಚ್ಚು ಸಂಸ್ಥೆಗಳಿಗೆ ಆದ್ಯತೆ ನೀಡಲು ಬಯಸಿದಲ್ಲಿ page ಕೆಳಗೆ ಇರುವ Add Institute ಅನ್ನು ಕ್ಲಿಕ್ ಮಾಡಿ ಹೆಚ್ಚಿನ ಆದ್ಯತೆಯನ್ನು ನಮೂದಿಸುವುದು.**

- ಈಗ District tab ಅನ್ನು ಕ್ಲಿಕ್ ಮಾಡಿ ನೀವು ಆದ್ಯತೆ ನೀಡಿರುವ ಸಂಸ್ಥೆಗಳಲ್ಲಿ ಸೀಟು ಹಂಚಿಕೆಯಾಗದಿದ್ದ ಪಕ್ಷದಲ್ಲಿ ದಾಖಲಾಗಬಯಸುವ ಇತರೆ ಜಿಲ್ಲೆಗಳನ್ನು ನಮೂದಿಸಿ (ಅಭ್ಯರ್ಥಿಗೆ ತಾನು ಅರ್ಜಿಯಲ್ಲಿ ನಮೂದಿಸಿದ ಯಾವುದೇ ಸಂಸ್ಥೆಯಲ್ಲಿ ಸೀಟು ಹಂಚಿಕೆಯಾಗದಿದ್ದ ಸಂದರ್ಭದಲ್ಲಿ ರಾಜ್ಯದ ಇತರೆ ಯಾವುದೇ ಜಿಲ್ಲೆಯಲ್ಲಿ ದಾಖಲಾಗಲು ಬಯಸಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಜಿಲ್ಲೆಗಳ ಆದ್ಯತೆಯನ್ನು ನಮೂದಿಸಲು ಅವಕಾಶ ನೀಡಲಾಗಿದೆ).

  ಮೇಲಿನ ಪ್ರಕ್ರಿಯೆಗಳ ನಂತರ ನಿಮ್ಮ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ನಿಮ್ಮ ಸಹಿಯನ್ನು scan ಮಾಡಿ upload ಮಾಡಿ.

  (Payment tab ಅನ್ನು ಕ್ಲಿಕ್ ಮಾಡಬೇಕು. ಆದರೆ, ಅದಕ್ಕೆ ಮೊದಲು ಈಗಾಗಲೇ ತುಂಬಿರುವ ಎಲ್ಲಾ tab ಗಳ ವಿವರಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಕಾರಣ ಶುಲ್ಕ ಪಾವತಿ ಮಾಡುವ ವರೆಗೂ ಮಾತ್ರ ವಿವರಗಳಲ್ಲಿ ತಿದ್ದುಪಡಿ ಮಾಡಲು ಅವಕಾಶವಿರುತ್ತದೆ. ಆದರೆ, ಒಮ್ಮೆ ಶುಲ್ಕ ಸಂದಾಯವಾದ ನಂತರ ವಿವರಗಳಲ್ಲಿ ತಿದ್ದುಪಡಿ ಮಾಡಲು ಅವಕಾಶ ಇರುವುದಿಲ್ಲ.)

- ಈಗ Payment tab ಅನ್ನು ಕ್ಲಿಕ್ ಮಾಡಿ ಶುಲ್ಕವನ್ನು ಪಾವತಿಸುವುದು.

- ಶುಲ್ಕ ಸಂದಾಯದ ನಂತರ Print tab ಅನ್ನು ಕ್ಲಿಕ್ ಮಾಡಿ ನಿಮ್ಮ ಅರ್ಜಿಯನ್ನು Print ತೆಗೆದುಕೊಳ್ಳಿ.

- ನಂತರ Log Out ಆಗಿ.

**ವೇಳಾ ಪಟ್ಟಿ (Calendar of Events):-**

| ಕ್ರ.ಸಂ | ವಿವರ | ದಿನಾಂಕ |
|---|---|---|
| 1 | ಆನ್‌ಲೈನ್ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಅವಧಿ | 13-01-2021 ರಿಂದ 26-01-2021 |
| 2 | ಅರ್ಜಿಗಳ ಪರಿಶೀಲನಾ ಅವಧಿ | 27-01-2021 ರಿಂದ 28-01-2021 |
| 3 | ಅರ್ಹತಾ ಪಟ್ಟಿ ಹಾಗೂ ತಿರಸ್ಕೃತ ಪಟ್ಟಿ ಪ್ರಕಟಣೆ | 28-01-2021 |
| 4 | ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ಮೂಲ ಪ್ರಮಾಣ ಪತ್ರಗಳ ಪರಿಶೀಲನೆ | 29-01-2021 ರಿಂದ 10-02-2021 |
| 5 | ಕಾಲೇಜು ಸೀಟು ಹಂಚಿಕೆ ಸಹಿತ ಆಯ್ಕೆ ಪಟ್ಟಿ ಪ್ರಕಟಣೆ | 15-02-2021 |
| 6 | ದಾಖಲಾತಿ ಶುಲ್ಕ ಪಾವತಿಸಿ ಜಿಲ್ಲಾ ನೋಡಲ್ ಕೇಂದ್ರದಲ್ಲಿ ದಾಖಲಾತಿ ಪತ್ರ ಪಡೆದು, ಮೂಲ ಪ್ರಮಾಣ ಪತ್ರಗಳೊಂದಿಗೆ ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳುವ ಅವಧಿ | 17-02-2021 ರಿಂದ 23-02-2021 |
| 7 | ನೋಡಲ್ ಕೇಂದ್ರಗಳಿಂದ ಕಂಟ್ರೋಲ್ ಶೀಟ್‌ಗಳನ್ನು ಸಿ.ಎ.ಸಿ ಗೆ ಸಲ್ಲಿಸುವುದು | 25-02-2021 |
| 8 | [Institution wise remaining seats (category wise)] Seat Matrix ಅನ್ನು ವೆಬ್‌ಸೈಟ್‌ನಲ್ಲಿ ಪ್ರಕಟಣೆ | 26-02-2021 |
| 9 | ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ Seat Matrix ಅನ್ನು ಪರಿಶೀಲಿಸಿ, ಮತ್ತೊಮ್ಮೆ ಆದ್ಯತೆಯನ್ನು ನೀಡುವ ಅವಧಿ | 26-02-2021 ರಿಂದ 28-02-2021 |
| 10 | ಕಾಲೇಜು ಸೀಟು ಹಂಚಿಕೆ ಸಹಿತ ಆಯ್ಕೆ ಪಟ್ಟಿ ಪ್ರಕಟಣೆ (ಮೊದಲನೇ ಸುತ್ತು) (ಕ್ರ.ಸಂ 6, 7 ಹಾಗೂ 8ನ್ನು ಒಳಗೊಂಡಂತೆ) | 02-03-2021 ರಿಂದ 06-03-2021 |
| 11 | ಕಾಲೇಜು ಸೀಟು ಹಂಚಿಕೆ ಸಹಿತ ಆಯ್ಕೆ ಪಟ್ಟಿ ಪ್ರಕಟಣೆ (ಎರಡನೇ ಸುತ್ತು) (ಕ್ರ.ಸಂ 6, 7, 8 ಹಾಗೂ 9ನ್ನು ಒಳಗೊಂಡಂತೆ) | 08-02-2021 ರಿಂದ 15-03-2021 |

## ಆನ್ ಲೈನ್ ಅರ್ಜಿ ಸಲ್ಲಿಕೆಯ ವಿವಧ ಹಂತಗಳು (Flow Chart)

www.schooleducation.kar.nic.in

↓

2020–21ನೇ ಸಾಲಿನ 2 ವರ್ಷದ ಬಿಇಡಿ ಕೋರ್ಸಿಗೆ ಆನ್ ಲೈನ್ ಅರ್ಜಿ

↓

ನೋಂದಣಿ

↓

ಲಾಗಿನ್ (User name and Password ಬಳಸಿ)

↓

ವೈಯಕ್ತಿಕ ವಿವರ

↓

ಮೀಸಲಾತಿ ವಿವಿರ

↓

ಶೈಕ್ಷಣಿಕ ವಿವರ

↓

ಆದ್ಯತೆ

↓

ಭಾವಚಿತ್ರ ಮತ್ತು ಸಹಿ (50 ಕೆಬಿ ವರೆಗೆ)

↓

ಶುಲ್ಕ ಪಾವತಿ

## **Flow chart for Online Application**

www.schooleducation.kar.nic.in

↓

Online application for admission of 2yrs BEd course

↓

Register

↓

Login

↓

Personnel details

↓

Reservation details

↓

Education Details

↓

Preference

↓

Photo & Sign (upto 50 KB)

↓

Payment